**<u>ದಿನಾಂಕಃ 30.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಂ ಕೆ ಎನ್ ವಕೀಲರಿಂದಃ-</u>

ನನಗೆ ಇಬ್ಬರು ಗಂಡು ಮಕ್ಕಳು. ಚಂದ್ರಶೇಖರ್ ಮತ್ತು ಪ್ರಕಾಶ, ಅವರಿಬ್ಬರೂ ಈಗ ಮರಣ ಹೊಂದಿರುತ್ತಾರೆ. ನನ್ನ ಮಗ ಪ್ರಕಾಶ ಪೋಲೀಸ್ ಇಲಾಖೆಯಲ್ಲಿ ಜೀಪು ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಮಗ ಪ್ರಕಾಶನ ಹೆಂಡತಿ ಅಂದರೆ ನನ್ನ ಸೊಸೆ ಸವಿತಾ ಎಂದರೆ ಸರಿ. ದಾವಾ ಆಸ್ತಿಗಳನ್ನು ನನ್ನ ಮಗ ಪ್ರಕಾಶ ಬದುಕಿದ್ದಾಗ ಆತನೇ ವ್ಯವಸಾಯ ಮಾಡಿಕೊಂಡು ಮನೆಯ ಜವಾಬ್ದಾರಿ ನಿಬಾಯಿಸುತ್ತಿದ್ದ ಎಂದರೆ ಸರಿ. ದಾವಾ ಆಸ್ತಿಗಳ ಪೈಕಿ ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ಮೊಬೈಲ್ ಟವರ್ ಇದೆ ಎಂದರ ಸರಿ. ಮೊಬೈಲ್ ಟವರ್ ನಿಂದ ಬಾಡಿಗೆ ಬರುತ್ತಿದೆ ಎಂದರೆ ಸರಿ. ಸಾಕ್ಷಿ ಮಂದುವರಿದು ಮಾಸಿಕ ರೂ.5000/- ಬರುತ್ತಿದೆ ಎಂದು ನುಡಿಯುತ್ತಾರೆ. ನನ್ನ ಮಗ ಪ್ರಕಾಶ ಬದುಕಿದ್ದಾಗ ಏನೇನು ವ್ಯವಹಾರ ಮಾಡುತ್ತಿದ್ದರು ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. ನನ್ನ ಮಗ ಪ್ರಕಾಶ ಬದುಕಿದ್ದಾಗ ಪ್ರತಿವಾದಿ ಪರಿಚಯ ಇದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ರಾಜುರವರು ನಮ್ಮ ಕುಟುಂಬಕ್ಕೆ 2013 ರಿಂದ  ಪರಿಚಯಸ್ಥರು ಎಂದರೆ ಸರಿಯಲ್ಲ. ದಾವಾ ಐಟಂ ನಂ. ಸ್ವತ್ತು 35 ರ 1 ಎಕರೆ  3 ಗುಂಟೆ  ತೆಂಗಿನ ತೋಟ ಮತ್ತು ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಎಂದರೆ ಸರಿ. ನನ್ನ ಮಗ ಪ್ರಕಾಶ ಪೋಲೀಸ್ ಇಲಾಖೆಯಲ್ಲಿ ಜೀಪು ಚಾಲಕ ಆಗಿದ್ದುದರಿಂದ ಸಮಯ ಸಿಗದ ಕಾರಣ ಅವರು ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಮತ್ತು ನನ್ನ ಗಂಡ ಜಮೀನು ನೋಡಿಕೊಳ್ಳುತ್ತಿದ್ದೆವು ಎನ್ನುತ್ತಾರೆ. ನನ್ನ ಮಗ ಪ್ರಕಾಶ ತೀರಿಕೊಂಡು ಸುಮಾರು 9 ವರ್ಷ ಆಗಿರುತ್ತದೆ.  ನನ್ನ ಮಗ ಪ್ರಕಾಶ ತೀರಿಕೊಳ್ಳುವ 1 ವರ್ಷ ಮೊದಲೇ ನನ್ನ ಗಂಡ ತೀರಿಕೊಂಡಿದ್ದರು. ನನ್ನ ಗಂಡ ಹೃದಯಾಘಾತದಿಂದ ತೀರಿಕೊಂಡಿರುತ್ತಾರೆ. ನನ್ನ ಗಂಡ ತೀರಿಕೊಂಡಾಗ ಅವರಿಗೆ  ಸುಮಾರು 70 ವರ್ಷ ವಯಸ್ಸಾಗಿತ್ತು.  ಅವರು ತೀರಿಕೊಳ್ಳುವ ಕಾಲಕ್ಕೆ ವ್ಯವಸಾಯ ಚಟುವಟಿಕೆಯಲ್ಲಿ ತೊಡಗುವುದನು ಕಡಿಮೆ

ಮಾಡಿದ್ದರು ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಗಂಡನಿಗೆ ವಯಸ್ಸಾದ ಕಾರಣ ನನ್ನ ಮಗ ಪ್ರಕಾಶ ಬದುಕಿದ್ದ ಕಾಲದಲ್ಲಿ ನಾನು ಮತ್ತು ನನ್ನ ಗಂಡ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿ.

ನಾನು ನನ್ನ ಗಂಡ, ನನ್ನ ಮಗ ಪ್ರಕಾಶ ಮತ್ತು ಸೊಸೆ ಸೇರಿ ಪ್ರತಿವಾದಿಗೆ ದಾವಾ ಐಟಂ ನಂ.1ರ ಸ್ವತ್ತಿಗೆ ಮುಂಗಡ ರೂ.3,00,000/- ಕೊಟ್ಟು ವಾರ್ಷಿಕ ರೂ.30,000/- ಕೊಡುತ್ತಿದ್ದರು ಎಂದರೆ ಸರಿಯಲ್ಲ. ವಾರ್ಷಿಕ 30,000/- ಹಣವನ್ನು ನಾನು, ನನ್ನ ಮೃತ ಮಗ ಮತ್ತು ಸೊಸೆ ಹಂಚಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಬೆಳೆದಿರುವ ತೆಂಗಿನ ಮರದಲ್ಲಿ ತೆಂಗಿನ ಕಾಯಿಯನ್ನು ಪ್ರತಿವಾದಿಯು ಕಿತ್ತುಕೊಳ್ಳುತ್ತಿದ್ದಾರೆ ಎಂದು ಹೇಳಿದ್ದು ಎಷ್ಟು ವರ್ಷಗಳಿಂದ ಆ ರೀತಿ ತೆಂಗಿನ ಕಾಯಿ ಕಿತ್ತುಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ಮಗ ಪ್ರಕಾಶ ಸತ್ತ ನಂತರ ಎನ್ನುತ್ತಾರೆ. ದಾವಾ ಐಟಂ ನಂ.1 ರ ಸ್ವತ್ತಿನಲ್ಲಿ ಪ್ರತಿವಾದಿಯು ಇನ್ನೇನು ಬೆಳೆ ಬೆಳೆಯುತ್ತಾರೆ ಎಂದರೆ ಸಾಕ್ಷಿಯು ನಾವೇ ಜೋಳ ಬೆಳೆಯುತ್ತಿದ್ದೇವೆ ಎನ್ನುತ್ತಾರೆ. ಪ್ರತಿವಾದಿಯು ದಾವಾ ಐಟಂ ನಂ.1 ರ ಸ್ವತ್ತಿನಲ್ಲಿ ರೇಷ್ಮೆ ಬೆಳೆ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಸ್ವತ್ತಿನಲ್ಲಿ ಇವತ್ತಿಗೂ ಪ್ರತಿವಾದಿಯು ರೇಷ್ಮೆ ಬೆಳೆ ಬೆಳೆದಿದ್ದರೂ ರೇಷ್ಮೆ ಬೆಳೆ ಬೆಳೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಪ್ರಕಾಶ 2016 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ಮಗ ಪ್ರಕಾಶ ಸತ್ತ ನಂತರ ನನ್ನ ಸೊಸೆ ಮಕ್ಕಳನ್ನು ಕರೆದುಕೊಂಡು ಅವರ ತವರು ಮನೆಯಲ್ಲಿ ನೆಲೆಸಿದ್ದರು ಎಂದಂರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಚನ್ನಪಟ್ಟಣದಲ್ಲಿ ಬೋಗ್ಯಕ್ಕೆ ಮನೆ ಮಾಡಿಕೊಂಡು ಪ್ರತ್ಯೇಕವಾಗಿ ಇದ್ದರು ಎಂದು ನುಡಿಯುತ್ತಾರೆ. ಪ್ರಕಾಶ ತೀರಿಕೊಂಡ ನಂತರ ನನ್ನ ಮತ್ತು ಸೊಸೆ ನಡುವೆ ಬಣಾವಣೆ ಇರಲಿಲ್ಲ ಎಂದರೆ ಸರಿ. ನನ್ನ ಮಗ ಪ್ರಕಾಶ ತೀರಿಕೊಳ್ಳುವ ಮೊದಲೇ ಮೊಬೈಲ್ ಟವರ್ ನಿಂದ ಬಾಡಿಗೆ ಬರುತ್ತಿತ್ತು ಎಂದರೆ ಸರಿ. ಪ್ರತಿವಾದಿ ಪ್ರತಿ ವರ್ಷ ಕೊಡುತ್ತಿದ್ದ ರೂ.30,000/- ಹಣ ಹಾಗೂ ಟವರ್ ನಿಂದ ಬರುವ ಬಾಡಿಗೆ ಹಣದ ಹಂಚಿಕೆ ವಿಚಾರವಾಗಿ ನನ್ನ ಮತ್ತು ನನ್ನ ಸೊಸೆ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಟವರ್ ನಿಂದ ಬರುತ್ತಿದ್ದ ಬಾಡಿಗೆ ಹಣವನ್ನು ನಾನು ಪಡೆದುಕೊಳ್ಳುತ್ತಿದ್ದೆ

ಎನ್ನುತ್ತಾರೆ. ಬಾಡಿಗೆ ಹಣವನ್ನು ಹಂಚಿಕೊಳ್ಳುವ ವಿಚಾರದಲ್ಲೇ ನನ್ನ ಮತ್ತು ನನ್ನ ಸೊಸೆ ನಡುವೆ ವೈಮನಸ್ಸು ಉಂಟಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಪ್ರತಿ ವರ್ಷ ಕೊಡುತ್ತಿದ್ದ ರೂ.30,000/- ಹಣ ವನ್ನು ನನಗೆ ನನಗೆ ಕೊಡು ಅಂತ ನಾನು ಮತ್ತು ನನ್ನ ಸೊಸೆ ಪ್ರತಿವಾದಿಯನ್ನು ಒತ್ತಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಮಗ ಪ್ರಕಾಶ ಸತ್ತ ನಂತರ ಪ್ರತಿವಾದಿ ಪ್ರತಿ ವರ್ಷ ಕೊಡುತ್ತಿದ್ದ ರೂ.30,000/- ಹಣ ವನ್ನು ನನ್ನ ಸೊಸೆಗೆ ಕೊಡುತ್ತಾ ಇದ್ದನು ಎಂದರೆ ಸರಿಯಲ್ಲ.

ವ್ಯವಸಾಯಕ್ಕೆ ಬಳಸುವ ಉಪಕರಣಗಳನ್ನು ಇಟ್ಟುಕೊಳ್ಳಲು ದನಕರುಗಳನ್ನು ಕಟ್ಟಿಹಾಕಲು, ದನದ ಕೊಟ್ಟಿಗೆ ಮಾಡಲು ಜಾಗ ಕೊಟ್ಟಿರುವುದಾಗಿ ನನ್ನ ದಾವಾ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದು, ನನ್ನ ಮನೆಯ ಪಕ್ಕದಲ್ಲಿ ಮತ್ತು ನನ್ನ ಜಮೀನಿನ ಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಜಾಗ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಮ್ಮ ಗ್ರಾಮ ಎಲೆಹೊಸಹಳ್ಳಿಯಿಂದ ಪ್ರತಿವಾದಿಯ ಊರು ಪಟಲು ಗ್ರಾಮಕ್ಕೆ 5 - 6 ಮೈಲು ಅಂತರ ಇದೆ ಎಂದರೆ ಸರಿ. ಪಟಲು ಗ್ರಾಮದಲ್ಲಿ ಪ್ರತಿವಾದಿಗೆ ಸೇರಿದ ತನ್ನದೇ ಆದ ವಾಸದ ಮನೆ ಇದೆ ಎಂದರೆ ಸರಿ.

ಪ್ರತಿವಾದಿ ದಾವಾ ಆಸ್ತಿಗಳಲ್ಲಿ ನೀರಾವರಿ ವ್ಯವಸ್ಥೆ ಮಾಡಿಕೊಂಡು ರೇಷ್ಮೆ ಬೆಳೆ, ಬಾಳೆ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಮಗ ಪ್ರಕಾಶ ಬದುಕಿದ್ದ ಕಾಲದಲ್ಲಿಯೇ ರೂ.3 ಲಕ್ಷ ಹಣವನ್ನು ನೀಡಿ ವಾರ್ಷಿಕ ರೂ. 30 ಸಾವಿರ ಹಣವನ್ನು ನನಗೆ , ನನ್ನ ಮಗನಿಗೆ ಮತ್ತು ನನ್ನ ಸೊಸೆಗೆ ಕೊಡುತ್ತಿದ್ದನು ಎಂದರೆ ಸರಿಯಲ್ಲ. ಇವತ್ತಿಗೂ ಸಹ ಪ್ರತಿವಾದಿಯೇ ಮುಂಗಡ ರೂ. 3 ಲಕ್ಷ ಮತ್ತು ವಾರ್ಷಿಕ ರೂ. 30 ಸಾವಿರ ಹಣ ಕೊಡುತ್ತಾ ಬಂದಿರುವುದರಿಂದ ಇವತ್ತಿಗೂ ಪ್ರತಿವಾದಿ ದಾವಾ ಐಟಂ ನಂ. 1 ರ ಸ್ವತ್ತಿನಲ್ಲಿ ಇರುವ ತೆಂಗಿನ ಕಾಯಿ ಫಸಲನ್ನು ತೆಗೆದುಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಗ ಪ್ರಕಾಶ ತೀರಿಕೊಂಡ ಎಷ್ಟು ವರ್ಷದ ನಂತರ ತಮಗೆ ಮತ್ತು ತಮ್ಮ ಸೊಸೆಗೂ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸಾಕ್ಷಿ 2 ವರ್ಷದ ನಂತರ ಎನ್ನುತ್ತಾರೆ.

ನಿ ಪಿ 4 ರ ರೀತ್ಯಾ ಪಟಲು ಗ್ರಾಮದ ರಾಜು ಎಂಬುವವರಿಗೆ ದಾವಾ ಐಟಂ.ನಂ.1 ರ ಸ್ವತ್ತು ಮತ್ತು ಮನೆಯನ್ನು ವಾರ್ಷಿಕ ರೂ.50,000/- ಕ್ಕೆ ಮಾತನಾಡಿ ಒಪ್ಪಂದ ಮಾಡಿ

ಬೋಗ್ಯಕ್ಕೆ ಕೊಟ್ಟಿದ್ದೆವು ಎಂದು ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದೆವು ಎಂದರೆ ಸಾಕ್ಷಿಯು ದೂರು ದಾಖಲು ಮಾಡಿದ್ದು ನಿಜ, ಆದರೆ ಬೋಗ್ಯಕ್ಕೆ ದಾವಾ ಆಸ್ತಿಯನ್ನು ಕೊಟ್ಟಿಲ್ಲ ಎನ್ನುತ್ತಾರೆ. ತಾವು ದೂರು ಕೊಟ್ಟ ನಂತರ ಪೊಲೀಸರು ತಮ್ಮ ಹೇಳಿಕೆಯನ್ನು ಪಡದುಕೊಂಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅತ್ತೆ ಮತ್ತು ಸೊಸೆ ಕಿತ್ತಾಡಿಕೊಂಡು ವಾರ್ಷಿಕ ರೂ.30,000/- ಹಣವನ್ನು ನನಗೆ ನನಗೆ ಕೊಡಿ ಎಂದು ನನಗೆ ತೊಂದರ ಕೊಡುತ್ತಿದ್ದಾರೆ ಎಂದು ಪೊಲೀಸರ ಮುಂದೆ ಪ್ರತಿವಾದಿಯು ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಸೊಸೆಯ ನಡುವೆ ಪ್ರತಿವಾದಿಯಿಂದ ವಾರ್ಷಿಕ ರೂ.30,000/- ಹಣ ಹಂಚಿಕೆ ಮಾಡುವ ವಿಚಾರದಲ್ಲಿ ಗೊಂದಲ ಆಗಿ, ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿ 2013 ರಿಂದ ಸತತವಾಗಿ ಇವತ್ತಿಗೂ ದಾವಾ ಸ್ವತ್ತಿನಲ್ಲಿ ಉಳುಮೆ ಮಾಡಿ, ಸ್ವಾಧೀನದಲ್ಲಿ ಇದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುದುವರಿದು ದನ ಕರು ಕಟ್ಟಿಕೊಳ್ಳಲು ಜಾಗ ಬೇಕು ಎಂದುದರಿಂದ ಪ್ರತಿವಾದಿಗೆ ದಾವಾ ಐಟಂ ನಂ. 1 ರ ಸ್ವತ್ತನ್ನು ಬಿಟ್ಟುಕೊಟ್ಟಿದ್ದೆವು ಎನ್ನುತ್ತಾರೆ. ಪ್ರತಿವದಿಗೆ ಕೊಡಬೇಕಾದ ರೂ.3,00,000/- ಹಣವನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಪ್ರತಿವಾದಿಯು ದಾವಾ ಸ್ವತ್ತಿಗೆ ತೊಂದರೆ ಕೊಡುತ್ತಿದ್ದಾನೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ನನ್ನ ದಾವಾ ಪತ್ರ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ನ್ಯಾಯಾಲಯ, ಚನ್ನಪಟ್ಟಣ